ಆ)

ಮಾರ್ಗ		ಪೂರ್ಣಗೊಳ್ಳುವ ದಿನಾಂಕ
ಬೈಯ್ಯಪ್ಪನಹಳ್ಳಿ–ಕ್ರಿಕೆಟ್ ಸ್ಟೇಡಿಯಂ	–	ಡಿಸೆಂಬರ್–2010
ಯಶವಂತಪುರ–ಸ್ವಸ್ತಿಕ್	–	ಜೂನ್–2011
ಯು.ಜಿ.ಸೆಕ್ಷನ್	–	ಜೂನ್–2012
ಸಿಟಿ ಸ್ಟೇಷನ್–ಮೈಸೂರು	–	ಆಗಸ್ಟ್–2012
ಸಿಟಿ ಮಾರ್ಕೆಟ್–ಆರ್.ವಿ.ರಸ್ತೆ	–	ಸೆಪ್ಟೆಂಬರ್–2012
ಆರ್.ವಿ.ರಸ್ತೆ ಟರ್ಮಿನಲ್ – ಪುಟ್ಟೇನಹಳ್ಳಿ ಕ್ರಾಸ್	–	ಸೆಪ್ಟೆಂಬರ್–2012
ಯಶವಂತಪುರ–ಪೀಣ್ಯ	–	ಜೂನ್–2011
ಪೀಣ್ಯ–ಹೆಸರಘಟ್ಟ ಕ್ರಾಸ್	–	ಸೆಪ್ಟೆಂಬರ್–2012

ಒಟ್ಟು 154 ಮೈಲಿಗಲ್ಲುಗಳಲ್ಲಿ 82 ಮೈಲಿ ಗಲ್ಲುಗಳನ್ನು ಮುಟ್ಟಲಾಗಿದೆ ಮತ್ತು 69 ಮೈಲಿಗಲ್ಲುಗಳು ಪ್ರಗತಿಯಲ್ಲಿವೆ.

ಆರ್ಥಿಕ ಪ್ರಗತಿ: 1419.55 ಕೋಟಿಗಳು, ಜೂನ್ 30, 2009ರವರೆಗೆ.

ಇ) ಮೂಲತಃ ಕಾಲಮಿತಿ–ಡಿಸೆಂಬರ್–2011

ವಾಸ್ತವ ಕಾಲಮಿತಿ–ಸೆಪ್ಟೆಂಬರ್–2012.

ಈ) ಪೀಕ್ ಅವರ್ ಪೀಕ್ ಡೈರೆಕ್ಷನ್ (PHPDT) 10,000ಕ್ಕಿಂತ ಹೆಚ್ಚು ಇರುವ ಸಂದರ್ಭದಲ್ಲಿ ಮಾನೋ ರೈಲು ಮೆಟ್ರೋ ರೈಲ್‌ಗಿಂತ ಆರ್ಥಿಕ ದೃಷ್ಟಿಯಿಂದ ಅನುಕೂಲಕರವಲ್ಲ.

ಉ) ಉದ್ಭವಿಸುವುದಿಲ್ಲ.

450 ಶ್ರೀ ಕುಮಾರಸ್ವಾಮಿ ಹೆಚ್.ಕೆ. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿದ ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿರುವ ಪ್ರಕರಣಗಳೆಷ್ಟು ಹಾಗೂ ನ್ಯಾಯಾಲಯದಲ್ಲಿರುವ ಪ್ರಕರಣಗಳೆಷ್ಟು (ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಕಬಳಿಸಿರುವವರ ಪೂರ್ಣ ಹೆಸರು ಮತ್ತು ವಿಳಾಸಗಳನ್ನು ನೀಡುವುದು);

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದ ಆಸ್ತಿಗಳನ್ನು ನಕಲಿ ದಾಖಲೆ ಸೃಷ್ಟಿಸಿರುವವರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು);

ಇ) ಇಲ್ಲಿಯವರೆವಿಗೂ ಮುಟ್ಟುಗೋಲು ಹಾಕಿಕೊಂಡಿರುವ ಪ್ರಕರಣಗಳೆಷ್ಟು (ಆಸ್ತಿಯ ಪರಿಮಾಣ ಹಾಗೂ ಬೆಲೆ ಇತ್ಯಾದಿಗಳನ್ನೊಳಗೊಂಡ ಪ್ರಕರಣವಾರು ಮಾಹಿತಿ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಪ್ರಕರಣಗಳ ಸಂಖ್ಯೆ: 09

ಆ ಎಲ್ಲವೂ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

1. ಶ್ರೀಮತಿ ಶಾರದಮ್ಮ, ನಂ–12/1, 3ನೇ ಅಡ್ಡ ರಸ್ತೆ, ರಾಮಚಂದ್ರಪುರ, ಬೆಂಗಳೂರು–21–ಸ್ವತ್ತಿನ ಅಳತೆ 50 x 30.
2. ಶ್ರೀ ಚಂದ್ರಶೇಖರಯ್ಯ, ನಂ–100/1, ಅನ್ನಸಂದ್ರ ಪಾಳ್ಯ, ವಿಮಾನಪುರ ಅಂಚೆ, ಬೆಂಗಳೂರು–17–ಸ್ವತ್ತಿನ ಅಳತೆ:
   ಖಾತಾ ನಂ–24ರಲ್ಲಿ 70 x 150.
   ಖಾತಾ ನಂ–25ರಲ್ಲಿ 90+165/2 x 350+465/2,
   ಖಾತಾ ನಂ–26ರಲ್ಲಿ 135+230/2 x 230+75/2.
3. ಶ್ರೀ ಜಿ.ಶಿವಕುಮಾರ್, ಗುಂಜೂರು ಗ್ರಾಮ, ಬೆಂಗಳೂರು ಪೂರ್ವ ತಾಲ್ಲೂಕು – ಸ್ವತ್ತಿನ ಅಳತೆ 30 x 70.
4. ಶ್ರೀ ಆಂಜನಪ್ಪ,
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ–ಸ್ವತ್ತಿನ ಅಳತೆ 30 x 50+55/2
5. ಶ್ರೀ ಗರುಡಯ್ಯ,
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ. – ಸ್ವತ್ತಿನ ಅಳತೆ 30 x 45.
6. ಶ್ರೀ ಪುಟ್ಟಯ್ಯ
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ– ಸ್ವತ್ತಿನ ಅಳತೆ 30 x 40
7. ಶ್ರೀ ನರಸಿಂಹಮೂರ್ತಿ
   ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ – ಸ್ವತ್ತಿನ ಅಳತೆ 30 x 40.

8. ಶ್ರೀ ಕೂರ್ಲಪ್ಪ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ಯಶವಂತಪುರ ಹೋಬಳಿ – ಸ್ವತ್ತಿನ ಅಳತೆ 30 x 40.

9. ಶ್ರೀ ಸುಲದಯ್ಯ,
ತಿಗಳರಪಾಳ್ಯ, ಕರಿಓಬನಹಳ್ಳಿ ದಾಖಲೆ, ದೊಡ್ಡಬಿದರುಕಲ್ಲು ಗ್ರಾಮ ಪಂಚಾಯತಿ ವ್ಯಾಪ್ತಿ – ಸ್ವತ್ತಿನ ಅಳತೆ 30 x 45.

ಆ) ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ, ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಯಾವುದು ಇಲ್ಲ.

1061 ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಒಟ್ಟು ಬಸ್ ಘಟಕಗಳೆಷ್ಟು;

ಆ) ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ತಾವರಗೇರಾ ಪಟ್ಟಣಕ್ಕೆ ಬಸ್–ಘಟಕವನ್ನು ಹೊಸದಾಗಿ ಮಂಜೂರು ಮಾಡಲು ಕ್ರಮ ಕೈಗೊಂಡಿದೆಯೇ: ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ?

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) :

ಅ) 4.

ಆ) ಕುಷ್ಟಗಿ ತಾಲ್ಲೂಕಿನಲ್ಲಿ ಬರುವ ತಾವರಗೇರೆಯು ಹೋಬಳಿ ಕೇಂದ್ರವಾಗಿದ್ದು, ಕುಷ್ಟಗಿ ತಾಲ್ಲೂಕು ಕೇಂದ್ರದಿಂದ 24 ಕಿ.ಮೀ. ದೂರವಿರುವುದರಿಂದ ತಾವರೆಗೇರೆಯಲ್ಲಿ ಇನ್ನೊಂದು ಹೊಸದಾಗಿ ಡಿಪೋ ಪ್ರಾರಂಭ ಮಾಡುವುದು ಆರ್ಥಿಕ ಹಿತದೃಷ್ಟಿಯಿಂದ ಪೂರಕವಾಗಿರುವುದಿಲ್ಲ.

983 ಶ್ರೀ ವಿಶ್ವನಾಥ್ ಎಸ್.ಆರ್. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀಲಗಿರಿ ಮರ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ಮಳೆಯೂ ಸಹ ಕಡಿಮೆಯಾಗುವುದಾಗಿ ತಜ್ಞರು ಅಭಿಪ್ರಾಯ ಪಟ್ಟಿರುವುದು ಸರ್ಕಾರಕ್ಕೆ ತಿಳಿದಿದೆಯೇ;